ಹುಬ್ಬಳ್ಳಿ ವಿಮಾನ ನಿಲ್ದಾಣದ ಪ್ರಗತಿ

೧೮೯ (೨೪೬) ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ ನಗರ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹುಬ್ಬಳ್ಳಿಯ ವಿಮಾನ ನಿಲ್ದಾಣದ ಪ್ರಗತಿ ಯಾವ ಹಂತದಲ್ಲಿದೆ ? ರಾಜ್ಯ ಸರಕಾರದಿಂದ ಮೆಚ್ಚ ಮಾಡಲಾದ ಹಣದ ವಿವರ ನೀಡಲಾಗುವುದೇ ?

ಆ) ೧೯೮೮ರ ಡಿಸೆಂಬರ್ ಒಳಗಾಗಿ ವಿಮಾನ ಯಾನ (ಪ್ರಯಾಣ) ಪ್ರಾರಂಭಿಸಬೇಕಾದುದ್ದು ನಿಜವಲ್ಲವೆ ? ಈಗಿನ ವಿಳಂಬಕ್ಕೆ ಸರ್ಕಾರದ ಅಡಚಣೆ ಇದೆಯೇ ?

ಇ) ಈ ವಿಳಂಬಕ್ಕೆ ಕಾರಣಗಳೇನೆಂಬುದು ಗೊತ್ತಾಗಿದೆಯೆ ?

ಈ) ಈ ಕೂಡಲೆ ವಾಯುದೂತ ಅಥವಾ ಬೋಯಿಂಗ್ ವಿಮಾನಯಾನವನ್ನು ಪ್ರಾರಂಭಿಸ ಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಸಚಿವರು).—

ಅ) ಹುಬ್ಬಳ್ಳಿಯ ವಿಮಾನ ನಿಲ್ದಾಣದ ಕೆಲಸದ ಪ್ರಗತಿಯು ಮುಕ್ತಾಯದ ಹಂತದಲ್ಲಿದೆ ಈ ಕೆಲಸಕ್ಕೆ ಈಗಾಗಲೇ ೧,೩೮,೬೯,೮೪೪ ರೂ.ಗಳನ್ನು ರಾಜ್ಯಸರ್ಕಾರದಿಂದ ಖರ್ಚು ಮಾಡಲಾಗಿದೆ.

ಆ) ೧೯೮೮ರ ಡಿಸೆಂಬರ್ ಒಳಗಾಗಿ ವಿಮಾನ ಯಾನ ಪ್ರಾರಂಭಿಸಬೇಕೆಂಬ ಕಾಲಾವಧಿಯನ್ನು ನಿಗದಿಪಡಿಸಿರುವುದಿಲ್ಲ. ಆದುದರಿಂದ ಈಗಿನ ವಿಳಂಬಕ್ಕೆ ರಾಜ್ಯಸರ್ಕಾರದ ಅಡಚಣೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 'ಆ' ಪ್ರಶ್ನೆಗೆ ಉತ್ತರಿಸಿರುವ ಪ್ರಕಾರ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ) ವಾಯುದೂತ ಯಾನ ಪ್ರಾರಂಭಿಸಬೇಕೆಂದು ಕೇಂದ್ರಸರ್ಕಾರಕ್ಕೆ ಈಗಾಗಲೇ ಶಿಫಾರಸ್ಸು ಮಾಡಲಾಗಿದೆ.

ಶ್ರೀ ಕೆ. ಪೆಜ್. ಪಾಟೀಲ್ (ಶ್ರೀ ಸಿ. ಜಿ. ಬೆಲ್ಲದ ಪರವಾಗಿ).—ಇದೇ ಮೇ ತಿಂಗಳಲ್ಲಿ ವಿಮಾನ ಯಾನ ಪ್ರಾರಂಭವಾಗುತ್ತದೆ ಎಂದು ಹೇಳಿದ್ದೀರಿ. ಆ ಮಾತು ಸತ್ಯ ಇದೆಯೇ ? ಸತ್ಯ ಇದ್ದರೆ ಅದರ ಪ್ರಕಾರ ಯಾವ ಯಾವ ಕಾರ್ಯಕ್ರಮಗಳು ಈಗಾಗಲೇ ಮುಗಿದಿವೆ ? ನೀವು ಹಳೆಯ ಉತ್ತರವನ್ನು ಇಲ್ಲಿ ಓದುತ್ತಿದ್ದೀರಿ. ಈ ಉತ್ತರ ತಯಾರಾದ ಮೇಲೆ ಅಲ್ಲಿ ಪ್ರಗತಿ ಆಗಿದೆ. ನಾನು ಮಾನ್ಯ ಮುಖ್ಯ ಮುಂತ್ರಿಗಳಾದ ಬೊಮ್ಮಾಯಿಯವರನ್ನು ಕೇಳುತ್ತೇನೆ. ಇದೇ ಬರುವ ಮೇ ತಿಂಗಳಲ್ಲಿ ವಿಮಾನ ಯಾನ ಪ್ರಾರಂಭವಾಗುತ್ತದೆಯೆ ? ಇದರಲ್ಲಿ ಏನಾದರೂ ತೊಂದರೆ ಇದ್ದರೆ ಅದು ನಿಮ್ಮದು ಎಂದಲ್ಲ, ಕೇಂದ್ರ ಸರ್ಕಾರದಿಂದ ಏನಾದರೂ ತೊಂದರೆ ಇದ್ದರೆ ಅದನ್ನಾದರೂ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಶಿವರಾಜ ಪಾಟೀಲ್‌ರವರಿಂದ ಒಂದು ಟೆಲಿಕ್ಸ್ ಮೆಸೇಜ್ ಬಂದಿದೆ. ಮೊದಲು ೯ನೇ ತಾರೀಖು ಪ್ರಾರಂಭ ಮಾಡುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳಿದ್ದರು. ನಂತರ ಇನ್ನೊಂದು ಬಂದಿದೆ. ಈಗ ಟ್ರಯಲ್ ರನ್ ಮಾಡುತ್ತಿದ್ದೇವೆ, ಆಮೇಲೆ ಕನ್‌ಫರ್ಮ ಮಾಡುತ್ತೇವೆಂದು ಹೇಳಿದ್ದಾರೆ. ಬಹುಶಃ ೯ನೇ ತಾರೀಖು ಆಗಬಹುದು. ಇಲ್ಲದಿದ್ದರೆ ಇನ್ನೂ ೧-೨ವಾರ ಮುಂದಕ್ಕೆ ಹೋಗಬಹುದು. ಟ್ರಯಲ್ ರನ್ ಆದ ಮೇಲೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಇದೇ ಮೇ ತಿಂಗಳಲ್ಲಿ ಪ್ರಾರಂಭ ಮಾಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ.